04-04-2000

ಅಜ್ಜ – ನೀವು ಯಾಕೆ ಅಂಥಾ ಪ್ರಶ್ನೆಗಳನ್ನು ಕೇಳ್ತೀರಿ. ಹೊಂದಾಣಿಕೆ ಬರೋದಿಲ್ಲ. ಉತ್ತರ ಹೇಳಿದ್ರೆ ಅದು ನಿಮ್ಮ ಮನಸ್ಸಿನ ಮೇಲೆ ಏನು ಪರಿಣಾಮ ಆಗಿ, ಏನು ಕೆಲಸ ಮಾಡ್ತದೆ ಅನ್ನೊದನ್ನು ನೋಡಬೇಕು. ಉತ್ತರ ಹೇಳುವಂಥಾದ್ದು ಮನೋರಂಜನೆಗಾಗಿ ಉತ್ತರ ಹೆಳುವುದಲ್ಲ. ಆ್ಞಂ.

ಅಜ್ಜ – ದಿವ್ಸ ಶಕ್ತಿಯ ರೂಪದಲ್ಲಿ ಬಂತು.

ವೇಣುಗೋಪಾಲ್ – ಅದು ಎಲ್ಲರಿಗೂ ಯಾಕೆ ಸಾಧ್ಯವಿಲ್ಲ.

ಅಜ್ಜ – ಎಲ್ಲರಿಗೂ ಸಾಧ್ಯ ಉಂಟು. ನಾವು ಏನೂ ಸಾಧನೆ ಮಾಡಿದವರೇ ಅಲ್ಲ. ಅಂಥಾದ್ದು ಯಾರಿಗೆ ಬೇಕೋ ಅವರಿಗೆ ಸಿಕ್ತದೆ. ಆಚರಣೆಯಲ್ಲಿ ಬರ್ಬೇಕು. ಇಲ್ಲಿ ಉತ್ತರ ಹೇಳೂದಿಲ್ಲ. ಹೋಗುವವನನ್ನು ನೋಡಿಕೊಂಡು ಅದಕ್ಕೆ ಸರಿಯಾಗಿ ಲೈನ್ ಕೊಡ್ತದೆ. ಹ. ಹ. ಹ. ಬಂದದ್ದು ಪ್ರಾಮುಖವಾದ್ದು.

ಶಾಂತ – ಬಂದದ್ದು ಪ್ರಾಮುಖ್ಯ ಅಂತ ಆದಮೇಲೆ ಏನೋ ಒಂದು ಉದ್ದಿಶ್ಯ ಇರಲೇಬೇಕಲ್ಲ.

ವೇಣುಗೋಪಾಲ್ – ಯಾವ ಉದ್ದೇಶ ಅಂತ ತೀರ್ಮಾನ ಆಗಿಲ್ವಾ.

ಅಜ್ಜ – ಅದು ಹೇಳ್ತಾ ಉಂಟು. ಹೇಳಿ ಆಗಿದಿಯಪ್ಪಾ.

ವೇಣುಗೋಪಾಲ್ – ಏನಂತ ತಿಳಿದುಕೊಳ್ಬೇಕು.

ಅಜ್ಜ – ಅದನ್ನ ಹೇಳಿ ಆಗಿದೆ. ಆತ್ಮ ಸಾಕ್ಷಾತ್ಕಾರವೇ ಜಗತ್ ಕಲ್ಯಾಣ ಎಂಬ ಧ್ಯೇಯವನ್ನಿಟ್ಟುಕೊಂಡು ಜನ್ಮಕ್ಕೆ ಬಂದವರು ನಾವು. ಅರ್ಥಾಯ್ತು. ಆ್ಞಂ.

ವೇಣುಗೋಪಾಲ್ – ಆತ್ಮಸಾಕ್ಷಾತ್ಕಾರವನ್ನೇ ಕಲ್ಯಾಣವಾಗಿಟ್ಟುಕೊಂಡು . . .

ಅಜ್ಜ – ಆಂ. ಹಾಗಲ್ಲ ಹಾಗಲ್ಲ. ಅದು ಶಬ್ದ ಹೇಗೆ ಉಂಟೋ ಹಾಗೇ ಬರ್ಬೆಕಷ್ಟೆ.

ಶಾಂತ – ಆತ್ಮ ಸಾಕ್ಷಾತ್ಕಾರವೇ ಜಗತ್ ಕಲ್ಯಾಣ ಎಂಬ ಧ್ಯೇಯವನ್ನಿಟ್ಟುಕೊಂಡು ಜನ್ಮಕ್ಕೆ ಬಂದವರು ನೀವು.

ಅಜ್ಜ – ಯಾರು? ನಾವು ಅಂದ್ರೆ ಯಾರು? ನೋಡಿ ಅಲ್ಲಿ ಇರೋದು.

ಶಾಂತ – ದಿವ್ಯ ಶಕ್ತಿ.

ಅಜ್ಜ – ದಿವ್ಯ ಶಕ್ತಿಯ ರೂಪದಲ್ಲಿ ಬಂದವನು ಯಾರು?

ಶಾಂತ – ಪರಮಾತ್ಮ.

ಅಜ್ಜ – ನೋಡಿ ಅದನ್ನು ಹೇಳಬಾರದು ಅಂತ್ಹೇಳಿ ಉಂಟು. ಸತ್ಯವನ್ನು ಹೇಳಬಾರದು ಅಂತ್ಹೇಳಿ ಉಂಟು. ಆದ್ರೆ ಹೇಳಬೇಕು ಅಂತ್ಹೇಳಿಯೂ ಉಂಟು. ಎಲ್ಲಿ ಹೇಳಬೇಕೆಂಬ ವಿಧಿ ವಿಧಾನಗಳುಂಟು ಅದಕ್ಕೆ. ಹ. ಹ.

ಶಾಂತ – ಎಲ್ಲಿ ಹೇಳಬೇಕು ಅಂಥಾ ಒಂದು ಸಂದರ್ಭ ಇನ್ನು ಬಂದಿಲ್ಲವಾ ಅಜ್ಜ.

ವೇಣುಗೋಪಾಲ್ – ಅಧಿಕಾರಿ ಇನ್ನೂ ಸಿಕ್ಕಿಲ್ಲ.

ಅಜ್ಜ – ಹಾಂ. ಅಧಿಕಾರಿ ಅಂದ್ರೆ ಅರ್ಹತೆ ಪಟ್ಟವರು. ಅರ್ಹತೆ ಪಟ್ಟವರೂ ಇದ್ದಾರೆ.

ವೇಣುಗೋಪಾಲ್ – ನಮಗಿನ್ನೂ ಅಂಥಾ ಅರ್ಹತೆ ಬಂದಿಲ್ಲ ಅಂತಾಯ್ತು.

ಅಜ್ಜ – ಏನೋ? ನಮಗೆ ಮಾತು ಬರ್ತಾ ಇಲ್ಲ. ಆಂ.

ವೇಣುಗೋಪಾಲ್ – ನಮಗೆ ಯೋಗ್ಯತೆ ಇದೆಯೋ ಇಲ್ಲವೋ ಅಂತ ತಿಳಿದುಕೊಳ್ಳೋದು ಹೇಗೆ?

ಅಜ್ಜ – ಯಾಕೆ ತಿಳಿದುಕೊಳ್ಳಬೇಕು.

ವೇಣುಗೋಪಾಲ್ – ಪ್ರಯತ್ನ ಪಟ್ಟು ಅದನ್ನು ಪಡೀಲಿಕ್ಕೆ.

ಅಜ್ಜ – ಜೀವಮಾನ ಕಾಲ ಅಂತ ಹೇಳ್ತದೆ. ಅದನ್ನ ಎಲ್ಲಿಂದ ತಗೊಳ್ಬೇಕು. ಜೀವಮಾನ ಕಾಲ ಅಂದ್ರೆ ಅರ್ಥ ಏನು? ಆ ಜೀವಾತ್ಮನ ಜೀವನ ಎಲ್ಲಿಂದ ಪ್ರಾರಂಭ ಆಯ್ತು. ನೋಡಿ.

ಶಾಂತ – ಅವನು ಜೀವಾತ್ಮನಾಗಿ ಬಂದಾಗಿಂದ.

ಅಜ್ಜ – ನೋಡಿ, ಇದು ಎರಡನೇ ಸ್ಟೆಪ್ ಇದೀಗ. ಈ ದೇಹದಲ್ಲಿ ನಡೆಯುವಂಥಾದ್ದು ಎರಡನೇ ಹಂತದ್ದು. ಹಾಗಾದ್ರೆ ಒಂದನೇ ಹಂತ ಬೇರೆಯೇ ಉಂಟು. ಆ ಒಂದನೇ ಹಂತವನ್ನು ಸಂಗ್ರಹ ಮಾಡಿದಾಗ ಮಾತ್ರ ಎರಡನೇ ಹಂತ ಅರ್ಥವಾಗಬಹುದು. ಹ. ಹ. ಹೇಳೋದಕ್ಕೆ ಬರೋದಿಲ್ಲ ಮಾತುಗಳು. ಹ. ಹ. ಹ. ಈಗ ಹೇಳುವಂಥಾದ್ದೆಲ್ಲ ಎರಡನೇ ಹಂತದ್ದು. ಒಂದನೇ ಹಂತ . . . ಅದನ್ನ ನಾವು ಹೇಳೋದಿಲ್ಲ. ಆ್ಞಂ. ಅಷ್ಟೇ ಹೇಳ್ತದೆ. ಅದು ಪಬ್ಲಿಕ್ಕಾಗಿ ಗೊತ್ತುಂಟಲ್ಲಪ್ಪ, ಆಂ.

ಶಾಂತ – ಹಿಂದೆ ಯಾವುದೋ ಒಂದು ದೇಹದಲ್ಲಿತ್ತಲ್ಲಾ.

ಅಜ್ಜ – ಹೌದು.

ಶಾಂತ – ಅಲ್ಲಿ ಯಾವ ರೀತಿಯ ಕರ್ಮಗಳನ್ನು ಮಾಡಿತ್ತು ಅದು.

ಅಜ್ಜ – ಆ ರೀತಿಯ ಕರ್ಮಗಳನ್ನು ಇಲ್ಲಿ ಹೇಳಿಯಾಗಿದೆಯಲ್ಲ. ಆ ರೀತಿಯ ಕರ್ಮಗಳು ಯಾವ ದೇಹದಲ್ಲಿ ನಡೆದಿತ್ತು ಅನ್ನೋದನ್ನ ಪತ್ತೆ ಹಚ್ಚುವಂಥಾದ್ದು ಆ ಕೆಲಸ ನಮ್ಮದಲ್ಲ.

ಶಾಂತ – ಜನರದ್ದು.

ಅಜ್ಜ – ಅಲ್ಲಿ ಪೂರ್ಣತೆಯಾಗಲಿಲ್ಲ. ಪೂರ್ಣತೆಗಾಗಿ ಇಲ್ಲಿ ಬಂತು. ಪುನಃ ಬಂದೆ, ಪುನಃ ಬಂದೆ, ಪುನಃ ಬಂದೆನು. ನಗು ಬರ್ತದೆ ನಮ್ಗೆ. ಯಾಕಿದೆನು ಹೊಸ್ದಲ್ಲ. ಹೊಸ ವಿಷಯ ಅಲ್ಲ. ಪಬ್ಲಿಕ್ ಸಂಸ್ಥೆಗೊಳಪಟ್ಟದ್ದು ಇದೆಲ್ಲ. ಆಶ್ಚರ್ಯ ಪಡುವಂಥ ವಿಚಾರವೇ ಇಲ್ಲ. ಈಗ ನಿಮಗೂ ಹಿಂದೆ ಜನ್ಮ ಇದ್ದಿರಬಹುದು. ಅಲ್ಲ. ಇದ್ದಿರಲೇ ಬೇಕು. ಅದು ಅಲ್ಲಿ ಗೊತ್ತಾಗೋದಿಲ್ಲ. ಆಲ್ಲಾ. ಕಾರಣ ಏನೂ ಅಂದ್ರೆ ಈ ಜನ್ಮವೇ ಗೊತ್ತಿಲ್ಲ. ಈ ಜನ್ಮವನ್ನು ನೀವು ಶೋಧನೆ ಮಾಡಿದಾಗ ನೋಡಿ ಅಲ್ಲಿ ಗೊತ್ತಾಕ್ತದೆ. ಈ ಜನ್ಮದ ಮೂಲಕ್ಕೆ ಹೋದಾಗ ಆ ಜನ್ಮದ ಅಂತಿಮ ಗೊತ್ತಾಗ್ತದೆ. ಅಂತಿಮವು ಗೊತ್ತಾದಾಗ ಮತ್ತೆ ಮೂಲವು ಗೊತ್ತಾಗ್ಲೇಬೇಕಲ್ಲ. ಹೀಗೆಲ್ಲ ಉಂಟು ವಿಚಾರಗಳು. ಹ. ಹ. ಹ. ಇದೂ ಕೂಡ ಹಿಂದೆ ಒಂದು ದೇಹದಲ್ಲಿದ್ದಿರಬಹುದು. ಒಟ್ಟಾರೆ ನಮ್ಗೆ ನಗೆಯೇ ಬರೋದು ಅಲ್ವಾ. ದೇಹದಲ್ಲಿರುವವನು 'ನಾನು' ಆಂ. ಪ್ರತಿಯೊಂದು ದೇಹದಲ್ಲಿರುವವನು 'ನಾನು'. ಅವ ಹಾಗೆ ಹೇಳಿದ್ದಾನಲ್ವಾ. ಅವ ಹೇಳಿದ್ದು ಹೌದು ಅಂತ್ಹೇಳಿಯಾದ್ರೆ, ನಮ್ಗೆ ಹೇಳ್ಳಿಕ್ಕೆ ಬರೋದಿಲ್ವಾ. ಆಂ. ಯಾರು? ಅವ ಹೇಳಿದ್ದು ಅಂದ್ರೆ, ಅವ ಅಂದ್ರೆ ಯಾರು? ಆಂ. ಕೂಡ್ಲೆ ಹೇಳ್ಬೇಕು.

ವೇಣುಗೋಪಾಲ್ – ನಾನೆ.

ಅಜ್ಜ – ಆಂ.

ವೇಣುಗೋಪಾಲ್ – ಅವ ಅಂದ್ರೆ ನಾನೆ.

ಅಜ್ಜ – ಅವ ಹೇಳಿದ್ದಾನೆ ಅಂದ್ರೆ ಯಾರವ.

ಶಾಂತ – ಕೃಷ್ಣ ಹೇಳಿದ್ದು ಗೀತೆಯಲ್ಲಿದೆ.

ಅಜ್ಜ – ಹಾಂ, ಅವ ಏನು ಹೇಳಿದ್ದಾನೆ ಗೀತೆಯಲ್ಲಿ.

ಶಾಂತ – "ಈಶ್ವರಸ್ಸರ್ವ ಭೂತಾನಾಂ ಹೃದ್ದೇಶೇರ್ಜುನು ತಿಷ್ಠತಿ."

ಮಂಜು – "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ, ಸರ್ವಕ್ಷೇತ್ರೇಷು ಭಾರತ."

ಅಜ್ಜ – ಏನು? ಹೊಸದ್ದು ಏನೂ ಇಲ್ಲ. ಎಲ್ಲ ಹಳೇದೆ. ನಾವು ಮೊದಲೇ ಇದ್ದವರು. ಒಬ್ಬ ಒಂದು ಮನಗೆ ಒಕ್ಕಲು ಬಂದಾಗ, ಆ ಹಿಂದೆ ಇದ್ದ ಮನೆ ಅವನಿಗೆ ನೆನಪಿಲ್ವಾ? ಆ್ಞಂ.

ಶ್ರೀನಾಥ್ – ಇದೆ ಇರುತ್ತೆ.

ಅಜ್ಜ – ಇರುತ್ತೆ ಅಂದ್ರೆ ನಿಮ್ಮ ಅನುಭವದಲ್ಲಿ ಉಂಟೋ. ಅಂಥಾದ್ದೇನಾದ್ರು ಹಾಗೆ ಹಿಂದೆ ಯಾವ್ದಾದ್ರು ಮನೆಯಲ್ಲಿದ್ರ ನೀವು. ಅಲ್ಲಾ ಇದೇಯೋ ಫಸ್ಟ್ ನಿಮಗೆ ಮನೆ.

ಶ್ರೀನಾಥ್ – ಇಲ್ಲ ಬೇರೆ ಮನೆಗಳಲ್ಲಿದ್ದೆ.

ಅಜ್ಜ – ಎಲ್ಲಿದ್ರಿ.

ಶ್ರೀನಾಥ್ – ಹೈದ್ರಾಬಾದ್‌ನಲ್ಲಿದ್ದೆ, ಬೆಂಗಳುರ್ನಲ್ಲಿದ್ದೆ, ಬೇರೆ ಮನೇನಲ್ಲಿ.

ಅಜ್ಜ – ನಿಮ್ಮ ನೇಟಿವ್ ಫಸ್ಟ್ ಯಾವ್ದು?

ಶ್ರೀನಾಥ್ – ಉತ್ತರಪ್ರದೇಶ.

ಅಜ್ಜ – ಅಲ್ಲಿದ್ರ ನೀವು ಮೊದಲು.

ಶ್ರೀನಾಥ್ – ಹೌದು.

ಅಜ್ಜ – ಅಲ್ಲಿಂದ ಇಲ್ಲಿಗೆ ಒಕ್ಕಲು ಬಂದ್ರಾ. ಆ ಮನೆಯ ನೆನೆಪು ಈಗ ನಿಮಗಿಲ್ವಾ.

ಶ್ರೀನಾಥ್ – ನೆನಪಿದೆ.

ಅಜ್ಜ – ಹಾಗಾದ್ರೆ ಹಿಂದಿನ ಜನ್ಮದಲ್ಲಿ ದೇಹದಲ್ಲಿದ್ದ ನೆನಪು ಯಾಕೆ ಇಲ್ಲ. ನೆನಪಾಗ್ಲೇಬೇಕಲ್ಲ. ಆಂ. ಆದ್ರೆ ಅದು ಪ್ರಾಧಾನ್ಯವಲ್ಲ. ನಿಮಗೆ ಹೈದ್ರಾಬಾದ್‌ನ ಮನೆ ನೆನಪಾದ್ರೆ ಏನು ಪ್ರಯೋಜನ ಉಂಟಾ? ಈಗ ಇರೋದು ಇದರ ನೆನಪು ಮಾಡಿಕೋ, ಅಷ್ಟೆ. ಅದೆಲ್ಲ ಪ್ರಾಮುಖ್ಯವಲ್ಲ. ಆದರ ಅಗತ್ಯವೂ ಇಲ್ಲ. ಹಿಂದೆ ಯಾವ ದೇಹದಲ್ಲಿತ್ತು . ಆಂ.

ಏನು ಪ್ರಯೋಜನ. ಈಗ ಈ ದೇಹದಲ್ಲುಂಟು. ಈ ದೇಹಕ್ಕೇ ಮಹತ್ವವಿಲ್ಲದೇ ಇರುವಾಗ ಆ ದೇಹಕ್ಕೆ ಮಹತ್ವ ಉಂಟಾ. ಆ್ಞಂ. ಆ ದೇಹದಲ್ಲಿದ್ದವನು ಇವನೇ ಈಗ ಈ ದೇಹದಲ್ಲಿರಲಿಕ್ಕೆ ಬಂದವನೂ ಇವನೇ. ಅವನ ವಿಚಾರ ಬೇಕು ಈಗ ನಮಗೆ. ದೇಹದ ವಿಚಾರವಲ್ಲ. ಅಲ್ವಾ ಶಾಂತ. ಇತ್ಲಾಗೆ ನೋಡು. ಹೌದೋ ಅಲ್ವೋ.

ಶಾಂತ – ಹೌದು.

ಅಜ್ಜ – ಹಾಗಾದ್ರೆ ಆತ್ಮನಿಗೆ ಪುನರ್ಜನ್ಮ ಎಂಬುದಿಲ್ಲ. ನಾವು ಅದನ್ನ ತೆಕ್ಕೊಳ್ಳಬೇಕು. ಆವರಣಕ್ಕೆ ಪುನರ್ಜನ್ಮಗಳು. ಆವರಣ ಹೋದಾಗ ಜನ್ಮಕ್ಕೆ ಬರ್ಲಿಕ್ಕೆ ಹೋಗ್ಲಿಕ್ಕೆ ಬೇರೆ ಸ್ಥಳವೇ ಇಲ್ಲ. ಇದನ್ನ ಪ್ರತಿಯೊಬ್ಬನೂ ಪಡಕೊಳ್ಳಬೇಕೂಂತ್ಹೇಳಿ. ಇದಕ್ಕೆ ಧ್ಯಾನ ಬೇಕು. ಧ್ಯಾನ ಮಾಡುವವನು ಮಾಡಲ್ಪಡುವವನೇ ಆಗುತ್ತಾನೆ. ಅದು ಪೂರ್ಣವಲ್ಲ. ಪೂರ್ಣತೆಗಾಗಿ ದಿವ್ಯಶಕ್ತಿಯ ರೂಪದಲ್ಲಿ ಪುನಃ ಬಂದು ವಿಕಾಸ ಹೊಂದಿ ಆತ್ಮವೇ ಆಗುತ್ತಾನೆ. ಮುಗಿಯಿತು. ಮತ್ತೆ ಹೋಗ್ಲಿಕ್ಕೆ ಬರ್ಲಿಕ್ಕೆ ಇಲ್ಲ. ಆವರಣವನ್ನು ಕಳಚಿಕೊಳ್ಳೂವಂಥಾದ್ದೇ ಇರೋದು. ಮನಸ್ಸನ್ನು ಸ್ವಸ್ಥಾನದಲ್ಲಿ ನಿಲ್ಲಿಸಿ, ಅಲ್ಲಿ ಶೋಧನೆ ಮಾಡುವಂಥಾದ್ದು. ಬಾಹ್ಯವಿಚಾರಗಳಲ್ಲಿ ಮನಸ್ಸು ಉಂಟಲ್ಲಾ ಹೊರಗಿನ ವಿಚಾರಗಳನ್ನು ಶೋಧನೆ ಮಾಡ್ತದಲ್ಲಾ, ವಿಜ್ಞಾನಿಗಳು. ಅದೆ ಮನಸ್ಸು ಅಂತರ್ಮುಖಕ್ಕೆ ಹೋದ್ರೆ ಅವನಿಗೆ ಶೋಧನೆ ಯಾಕಾಗ್ಲಿಕ್ಕಿಲ್ಲ. ಇದು ವಿಜ್ಞಾನಿಗಳಿಗೆ ಕಾಣ್ತದ, ಗೊತ್ತಾಕ್ತದಾ ಇದು . . . ಹ. ಹ. ಆಯ್‌ಶ್. ಅವ ದಾಟಿ ಹೋಗಿ ಬಿಟ್ಟ ಅವ ಈ ವಿಜ್ಞಾನಕ್ಕೆ ಸಿಕ್ಕೊದಿಲ್ಲ. ನೋಡಿ ನೀವೂ ಬಂದವರು; ನಾವೂ ಬಂದವರು. ನೀವು ಬಂದ ರೀತಿ ಬೇರೆ. ನಾವು ಬಂದ ರೀತಿ ಬೇರೆ. ಅಷ್ಟೇ ವ್ಯತ್ಯಾಸ. ನೀವು ತಂದೆ ತಾಯಿಯ ಗರ್ಭದ ಮೂಲಕ ಬಂದವರು. ನಾವು ಡೈರೆಕ್ಟಾಗಿ ಬಂದವರು. ಕರ್ಮ ಬಾಕಿ ಇಲ್ಲದ್ದರಿಂದ ತಂದೆ ತಾಯಿಯ ಗರ್ಭ ಪ್ರವೇಶ ಮಾಡ್ಲಿಲ್ಲ. ಸೀದಾಸೀದ ಬಂದವರು. ನಾವು ಕಳುಹಿಸಲ್ಪಟ್ಟವರು. ಕಳುಹಿಸಲ್ಪಟ್ಟವನು ಕಳುಹಿಸಿದವನು ಒಬ್ಬನೆ. ಆದರೂ ನಾವು ಕಳುಹಿಸಲ್ಪಟ್ಟವರು. ಪ್ರಪಂಚಕ್ಕಾಗಿ.

ವೇಣುಗೋಪಾಲ್ – ಜೊತೆಗಿದ್ದವರು ಎಲ್ಲಿಗ್ಹೋದ್ರು. ಅಂದ್ರೆ ರಾಮ್ ಚಂದ್ರ ಭಟ್ರು ಎಲ್ಲಿಗ್ಹೋದ್ರು.

ಅಜ್ಜ – ಆ ಪ್ರಶ್ನೆ ಬೇಡ ಇಲ್ಲಿ. ಅದು ಇಲ್ಲಿಗೆ ಅನ್ವಯ ಆಗೋದೇ ಇಲ್ಲ. ಅದು ಇಲ್ಲಿಗನ್ವಯಿಸೋದಿಲ್ಲ. ರಾಮ್ ಚಂದ್ರ ಭಟ್ ಅಂದ್ರೆ ಏನು? ದೇಹದ ಹೆಸರು ಅದು.

ವೇಣುಗೋಪಾಲ್ – ಅಲ್ಲಾ ದೇಹದಲ್ಲಿದ್ದ ಚೈತನ್ಯ.

ಅಜ್ಜ – ಹಾಗೆ ಹೇಳಿ. ರಾಮಚಂದ್ರ ಭಟ್ರು ಅಂತ ಕೇಳಿದ್ದಲ್ವಾ ನೀವು. ನೋಡಿ ಅದು ಹೇಳಿ ಆಗಿದೆಯಲ್ಲಾ. ಅದು ಕರ್ಮ ಬಂಧನದಿಂದ ಬಿಡುಗಡೆ ಹೊಂದಿ ಮೂಲ ಸ್ಥಾನಕ್ಕೇ ಹೋಯಿತು. ಆದರೆ ಪೂರ್ಣವಾಗಿಲ್ಲ.

ವೇಣುಗೋಪಾಲ್ – ಅಂದ್ರೆ ಅದು ಕರ್ಮ ಕಳೆದುಕೊಂಡುಬಿಡ್ತು ಅಂತೀರಾ.

ಅಜ್ಜ – ಕರ್ಮ ಬಂಧನದಿಂದ ಬಿಡುಗಡೆ ಹೊಂದಿ ಹೋಯ್ತು ಅದು.

ವೇಣುಗೋಪಾಲ್ – ಅಂದ್ರೆ ಕರ್ಮ ಪೂರ್ತಿ ಮುಗಿಸಿಬಿಟ್ಟು ಹೋದದ್ದು. ಅಂದ್ರೆ ಈ ಭೂಲೋಕದಲ್ಲಿ ತನ್ನ ಕರ್ಮವನ್ನ ಮುಗಿಸಿಬಿಟ್ಟು, ಈ ವಲಯದಲ್ಲಿ ಕರ್ಮವನ್ನು ಮುಗಿಸಿಬಿಟ್ಟು ಹೋಯ್ತು ಅಂತ ಹೇಳ್ತಿರಾ.

ಅಜ್ಜ – ಹೌದು. ಆದ್ರೂ ಪೂರ್ಣ ಆಗ್ಲಿಲ್ಲ.

ವೇಣುಗೋಪಾಲ್ – ಹಾಗಾದ್ರೆ ಪೂರ್ಣ ಆಗದೆ ಬೇರೆ ಚೈತನ್ಯ ಇಲ್ಲಿ ಬಂದಿದೆ ಅಂತ ಹೇಳ್ತಿರಾ.

ಅಜ್ಜ – ಛೇ. ಹಾಗೆಲ್ಲ ಕೇಳಿದ್ರೆ ಇಲ್ಲಿ ಹೊಂದಾಣಿಕೆ ಬರೋದಿಲ್ಲ.

ವೇಣುಗೋಪಾಲ್ – ಅಲ್ಲಾ ಒಂದು ಬಂತು ಅಂದ್ರೆ ಇರೋದು ಎಲ್ಲಿ ಹೋಯ್ತು ಅಂತ.

ಅಜ್ಜ – ಈ ಒಂದು ಬಂತು ಅಂದ್ರೆ ಯಾವುದು ಬಂದದ್ದು.

ವೇಣುಗೋಪಾಲ್ – ಈಗ ಹೇಳಿದ್ರಲ್ಲ ನಾವು ಅದಕ್ಕಾಗಿ ಬಂದದ್ದು ಅಂತ.

ಅಜ್ಜ – ಅದು ಬಂದದ್ದು ಇಲ್ಲಿ ಏನಾಯ್ತು. ಕುಮಾರಧಾರೆ ನದಿ ನೇತ್ರಾವತಿಯೊಳಗೆ ಸೇರಿತು ಅಲ್ಲಿ ಪಾಣೆ ಮಂಗ್ಳೂರಿಗೆ ಹೋಗುವಾಗ. ಅಲ್ಲಿ ಸಮುದ್ರ ಸೇರುವಾಗ ಅದು ನೇತ್ರಾವತಿಯೆ. ಕುಮಾರಧಾರೆ ಇಲ್ಲ.

ವೇಣುಗೋಪಾಲ್ – ಎರಡೂ ಸೇರಿ ಹೋಗಿದೆ. ಹಾಗಾದ್ರೆ ಈಗ ಇದು ಅದು ಎರಡೂ ಸೇರಿದೆ ಅಂತ ಹೇಳ್ತೀರಾ.

ಅಜ್ಜ – ಯಾವ್ದೆಲ್ಲಾ

ವೇಣುಗೋಪಾಲ್ – ನಿಮ್ಮ ಹಳೇದು ಮೊದಲಿದ್ದ ಚೈತನ್ಯ ಮತ್ತು ಹೊಸದಾಗಿ ಬಂದ ಚೈತನ್ಯ.

ಅಜ್ಜ – ಅಂದ್ರೆ ನಿಮ್ಮ ಹಳೇ ಚೈತನ್ಯ ಅಂದ್ರೆ ಯಾರದ್ದು? ನಿಮ್ಮ ಅಂದ್ರೆ ಯಾರ?

ವೇಣುಗೋಪಾಲ್ – ಈ ದೇಹದೊಳಗಿದ್ದದ್ದು.

ಅಜ್ಜ – ಇಲ್ಲಿ ಸರಿಯಾಗಿ ಹೊಂದಾಣಿಕೆ ಬರೋದಿಲ್ಲ. ಆ ಪ್ರಶ್ನೆ ಸರಿಯಾಗಿಲ್ಲ. ಕರೆಕ್ಟ್ ಬರ್ಬೇಕು. ಆಗ ಉತ್ತರ ಇಲ್ಲಿಂದ ಬರ್ತದೆ. N.P. ಅಲ್ಲಿ ಅದು ಒಂದಾಯಿತು. ಒಂದೇ ಮತ್ತೆ.

ವೇಣುಗೋಪಾಲ್ – ಅದಕ್ಕೆ ಪ್ರತ್ಯೇಕ ಅಸ್ತಿತ್ವ ಇಲ್ಲ. ಹಳೇದಕ್ಕೆ ಪ್ರತ್ಯೇಕ ಅಸ್ತಿತ್ವ ಇಲ್ಲ.

ಅಜ್ಜ – ನೋಡಿ ನದೀ ಉದಾಹರಣೆ ಕೊಟ್ಟಿದೆ ಇಲ್ಲಿ. ಹಾಗೆ.

ವೇಣುಗೋಪಾಲ್ – ಹೌದು.

ಅಜ್ಜ – ಅಸ್ತಿತ್ವ ಉಂಟು ಅಥವ ಇಲ್ಲ ಅಂತ್ಹೇಳಿ ನಾವು ಹೇಳೋದಿಲ್ಲ. ಅದನ್ನ ಇನ್ನೊಬ್ರು ತಿಳಿದುಕೊಳ್ಳಬೇಕು. ಹಾಗೆ.

ವೇಣುಗೋಪಾಲ್ – ಹಾಗಾದ್ರೆ ಅದರ ಸ್ವರೂಪ ಕೂಡ ಬದಲಾವಣೆ ಆಗ್ಬಿಡತ್ತೆ.

ಅಜ್ಜ – ಎಲ್ಲಾ ಬದಲಾವಣೆ. ಎಲ್ಲಾ ಅಸ್ತಿತ್ವನು ಹೋಗ್ಬೇಕು. ಅದು ಬರಬೇಕಾದ್ರೆ ಸ್ವಲ್ಪ ಅಸ್ತಿತ್ವ ಇತ್ತಲ್ಲಿ. ಬಂದ ಮೇಲೆ ಅಸ್ತಿತ್ವವನ್ನು ಕಳಕೊಂಡಾಗ ಸ್ವತಂತ್ರನಾದ. ಸ್ವತಂತ್ರನಾಗುವಂಥಾದ್ದು ಅದರ ಜನ್ಮಸಿದ್ಧವಾದ ಹಕ್ಕು ಅಂತ ಹೇಳ್ಬಹುದು. ಸ್ವತಂತ್ರನಾದ ಅಂದ್ರೆ ಆತ್ಮನೇ ಆದ. ಇದೇ ವ್ಯಕ್ತಿ ಸ್ವಾತಂತ್ರ್ಯದ ಮಹತ್ವ. ಹ. ಹ. ಹ.

ಅಚ್ಛಾವಾಲಾ ದೇಖತಾ ಹೈ, ದೇಖನೇವಾಲಾ ಗಯಾ ಹೈ. ಅಂದ್ರೆ ಕನ್ನಡದಲ್ಲಿ ಅದರ ಅರ್ಥ ಹೇಳು.

ಮಂಜುಳ – ಒಳ್ಳೆಯವನು ನೋಡ್ತಾನೆ. ನೋಡುವವನು ಹೊರಟು ಹೋಗಿದಾನೆ.

ಅಜ್ಜ – ಹೌದು. ಹ. ಹ. ಜೀವಾತ್ಮನು ದೇಹದಲ್ಲಿ ಇದ್ದಾನೆ. ಹೇಗೆ? ಅಧೋಮುಖನಾಗಿದ್ದಾನೆ. ಅವನನ್ನು ಊರ್ಧ್ವಮುಖ ಮಾಡ್ಬೇಕು. ಅದು ಧ್ಯಾನದಿಂದ ಸಾಧ್ಯ. ಮಂತ್ರ ಏನದು.

ವೇಣುಗೋಪಾಲ್ – ಅಧೋನಿಷ್ಟ್ಯಾವಿತಸ್ಯಾಂತೇ ನಾಭ್ಯಾಂ ಉಪರಿ ತಿಷ್ಠತಿ.

ಅಜ್ಜ – ಅದಲ್ಲಾ ಬೇರೆ ಇರ್ಬೇಕಲ್ಲಾ. ಯಾವ್ದದು.

ವೇಣುಗೋಪಾಲ್ – ಹೃದಯಂಚಾಪ್ಯಧೋಮುಖಂ ಅಂತ ಬರ್ತದೆ.

ಅಜ್ಜ – ಏನೋ, ನಮಗೆ ಮಂತ್ರ ಗೊತ್ತಿಲ್ಲ. ಅರ್ಥ ಹೇಳಿ.

ವೇಣುಗೋಪಾಲ್ – ಅಧೋಮುಖವಾಗಿದೆ ಅಂತ್ಹೇಳಿ. ಆದ್ರೆ ಅದು ಆಧ್ಯಾತ್ಮಿಕ ಹೃದಯ ಅದು.

ಅಜ್ಜ – ಆಧ್ಯಾತ್ಮಿಕ ಹೃದಯ ಅಂದ್ರೆ ಏನದು.

ರಾಮಭದ್ರ – ಅದೇ ಅಂಗುಷ್ಠಮಾತ್ರ ಪುರುಷಃ ಅಂತ ಹೇಳಿ ವಿವರಣೆ ಕೊಟ್ಟಿದ್ದು. ಅಲ್ಲಿ ಏನಿದೆಯೋ ಅದರ ಬಗ್ಗೆನೇ ವಿವರಣೆ ಕೊಟ್ಟಿದ್ದು.

ಅಜ್ಜ – ಸರೀ ಹೆಳ್ಬೇಕು. ನೀವು ನಮಗೆ ಸರಿಯಾಗಿ ವಿವರಣೆ ಕೊಡೋದಿಲ್ಲ. ಯಾರು?

ರಾಮಭದ್ರ – ಜೀವಾತ್ಮ.

ಅಜ್ಜ – ಜೀವಾತ್ಮ. ಜೀವಾತ್ಮ ಅಂದ್ರೆ ಪರಮಾತ್ಮನೇ ಜೀವಾತ್ಮನ ರೂಪದಲ್ಲಿ ಬಂದು ಇರುವಂಥದ್ದು. ಅವನನ್ನು ಊರ್ಧ್ವಮುಖ ಮಾಡಿದ್ರೆ ಅವನು ಪರಮಾತ್ಮನ ಹಾಗೆ ಆಕ್ತಾನೆ. ಆ್ಞಂ. ಅವನು ಊರ್ಧ್ವಮುಖ ಆದ್ರೆ, ಐದು ನಿಮಿಷ ದೇಹದಲ್ಲಿ ಇರೋದಿಲ್ಲ. ಅವ ಹೊರಟು ಬಿಡ್ತನೆ. ಹಾಂ. ಅವ ಹೋಗುವಂಥಾ ಸ್ಥಾನ ಇದು (ನೆತ್ತಿಯ ಭಾಗವನ್ನು ತೋರಿಸುತ್ತಾ) ಇಲ್ಲಿಂದ ಅವ ಹೋಕ್ತಾನಪ್ಪಾ. ಬಂಧನಕ್ಕೊಳಪಟ್ಟ ಜೀವಾತ್ಮನು ಹೋಗುವಂಥಾ ದಾರಿಗಳು ಬೇರೆ ಬೇರೆ. ಬಂಧನದಿಂದ ಬಿಡುಗಡೆ ಹೊಂದಿದ ಜೀವಾತ್ಮನು ಹೋಗುವುದು ಇಲ್ಲಿ (ನೆತ್ತಿಯನ್ನು ತೋರಿಸಿ). ಏನಪ್ಪ ಪ್ರಸಂಗ ಇದು ನೋಡುವ ಮುಂದೆ. ಈಗ ಸಾಕು. ಕಾರಣದೇಹ ನಾಶವಾದಾಗ ಮತ್ತೆ ಹೋಗ್ಲಿಕ್ಕೂ ಇಲ್ಲ. ಬರ್ಲಿಕ್ಕೂ ಇಲ್ಲ. ದೇಹ ಬಿಟ್ಟು ಹೋಕ್ತದೆ. ಅದೇ ಘಟಾಕಾಶವನ್ನು ಒಡೆಯುವಂಥಾದ್ದು. ಘಟವನ್ನು ಒಡೆದುಬಿಟ್ಟಾಗ ಅದರೊಳಗಿದ್ದ ಆಕಾಶ ಹೊರಗೆ ಹೊರಟು ಹೋಕ್ತದಾ? ಆ್ಞಂ. ಇದು ಘಟ ಹೊಡೆದು ಹೋಯ್ತು. ಅಷ್ಟೆ. ಹಾಗೆ ಇಲ್ಲಿ ದೇಹವು ಬಿದ್ದು ಹೋಯ್ತು ಅಷ್ಟೆ. ಅದರೊಳಗಿರುವಂಥಾದ್ದು . . . ಅಂದ್ರೆ ಈ ದೇಹವು ಇರುವಾಗಲೇ ಆ ಕಾರಣದೇಹವು ಒಡೆದು ಹೋದಾಗ, ಒಳಗೂ ಹೊರಗೂ ಒಂದೆ ಅಲ್ಲಿ. ಆದ್ರೆ ಪ್ರಪಂಚಕ್ಕೆ ಬೇಕಾಗಿ ಅವ ಸ್ವಲ್ಪ ಸ್ವಲ್ಪ ಇಟ್ಟುಕೊಳ್ತಾನೆ ಅಷ್ಟೇ. ಇಲ್ಲದಿದ್ರೆ ದೇಹ ಉಳಿಯೋದಿಲ್ಲ.

ವೇಣುಗೋಪಾಲ್ – ಅವನಿಗೆ ಬೇಕಿಲ್ಲ ಪ್ರಪಂಚಕ್ಕೆ ಬೇಕು. ಅಲ್ಲಾ.

ಅಜ್ಜ – ಪ್ರಪಂಚಕ್ಕೆ ಬೇಕಾಗಿ ಅವ ಇಟ್ಟುಕೊಳ್ಳೊದು. ಅವ ಬಂದದ್ದು ಪ್ರಪಂಚಕ್ಕಾಗಿ. ಅವನ ಸ್ವಂತಕ್ಕಾಗಿ ಬಂದದ್ದಲ್ಲ. ಸ್ವಂತಕ್ಕಾಗಿಯಾದ್ರೆ ಅವ ಬರುವ ಅವಶ್ಯಕತೆಯೇ ಇಲ್ಲ. ಹಾಂ. ಶಾಂತ ಎಲ್ಲ ರೆಕಾರ್ಡ್ ಮಾಡಿಕೊಳ್ತಿದಾಳೆ ಅಲ್ಲಾ. ಹ್ಞಾಂ. ಸ್ವಂತಕ್ಕಾಗಿ ಅಲ್ಲ. ಅವ ಬರಬೇಕಿತ್ತು. ಅವನ ಬದ್ಲಿಗೆ ಇವನನ್ನು ಕಳಿಸಿಬಿಟ್ಟ. ಅವ ಬರೋದಿಲ್ಲ ಹಾಗೆ. ಹ್ಞಾಂ. ಸಾಕಪ್ಪಾ ಎಲ್ಲಾ ಬಿದ್ದಾಯ್ತಲ್ಲ ಆಫ್ ಮಾಡಿ. ಹ. ಹ. ಹ. ನಗೆ ಬರ್ತದೆ ನಮ್ಗೆ.

*****

09-04-2000

ಬೆಂಗಳೂರು, ಮಂಜುಳನ ಮನೆ.

ಯದುನಾಥ್ – ಥಿಯಸಾಫಿಕಲ್ ಸೊಸೈಟಿ ಅಂತ ಇದೆ ಮದ್ರಾಸಲ್ಲಿ. ಅಲ್ಲಿ ಅವ್ರಿಗೆ ಈ ದೇಹಾಂತರದ ಕೆಲವು ಅನುಭವಗಳೂ, ಅವರು ಮಾಸ್ಟರ್ಸ್ ಅಂತ ಅವರನ್ನು ಕರ್ಕೊಂಡು ಹೋಗಿ ಟಿಬೆಟ್ಟಲ್ಲಿ ಆ ಧ್ಯಾನದಲ್ಲಿದ್ದಂಥ ಗುರುಗಳ ಜೊತೆ ಮಾತು ಕಥೆ ನಡಿತಾಯಿತ್ತು. ಅದೆಲ್ಲ ಈಗ ಭ್ರಮೆ ಅಂತ ಹೇಳ್ತಾರಲ್ಲಾ. ಅವರ ಗುರುಗಳ ಜೊತೆ ಹೋಗಿ ಆ ದೇಹದಿಂದ ಬಿಟ್ಟು ಲೈಬ್ರರಿಗೆ ಹೋಗಿ ಅಲ್ಲಿಂದ ಪುಸ್ತಕಗಳನ್ನು ತಗೊಂಡು ಬಂದಿದ್ದೆಲ್ಲಾ ಇದೆ. ಆದ್ರೂ ಅದನ್ನ ಭ್ರಮೆ ಅಂತ ಹೇಳ್ತಾರೆ. ತನಗಾದ ಅನುಭವವನ್ನು ಯಾಕೆ ಭ್ರಮೆ ಅಂತ ಹೇಳ್ತಾನೆ ಅವನು.

ಅಜ್ಜ –  ಅದು ಎರಡನೆ ಹಂತದಕ್ಕಾಗುವಾಗ ಭ್ರಮೆ ಅಂತ ಹೇಳ್ಳಿಕ್ಕೂ ಸಾಕು. ಈಗ ಆ ದಾರಿಯಲ್ಲಿ ಹೋಕ್ತಾ ಇರುವಾಗ ಒಂದು ಎರಡು ಹಂತಗಳನ್ನು ದಾಟಿ ಮುಂದೆ ಮುಂದೆ ಹೋಗುತ್ತಾ ಇರುವಾಗ ಹಿಂದಿನದ್ದು ಭ್ರಮೆ ಅಂತ್ಹೇಳಿ ಕಾಣಲಿಕ್ಕೆ ಸಾಧ್ಯತೆ ಉಂಟು.

ಯದುನಾಥ್ –  ಓಹೋ, ಹೌದು.

ಅಜ್ಜ –  ಹೌದು, ಅದೆಲ್ಲಾ ಸಾಧ್ಯತೆ ಉಂಟು.

ಯದುನಾಥ್ –  ಹಾಗಾದ್ರೆ ನಿಜವಾದ ನೈಜ ಸ್ಥಿತಿ, ನೈಜತೆ ಯಾವ್ದು. ಈಗ ಎರಡನೆ ಹಂತಕ್ಕೆ ಹೋದಾಗ ಮೊದಲ್ನೆದು ಭ್ರಮೆ. ನಾಲ್ಕನೇ ಹಂತಕ್ಕೆ ಹೋದಾಗ ಮೂರನೇದು ಭ್ರಮೆ. ಹಾಗಾದ್ರೆ . . .

ಅಜ್ಜ –  ನೈಜ ಸ್ಥಿತಿಯಲ್ಲಿ, ಅದರಲ್ಲಿ ಏನೂ ಇಲ್ಲ. ಯಾವುದೂ ಇಲ್ಲ. ಯಾವುದೂ ಅಲ್ಲದೇ ಇರುವ ಸ್ಥಿತಿಯೇ ನೈಜ ಸ್ಥಿತಿ. ಸ್ಥಿತಿಯಿಲ್ಲದ ಸ್ಥಿತಿ. ಅಂದ್ರೆ ಸಹಜಾವಸ್ಥೆ. ಅಲ್ಲಿ ಯಾವುದೂ ಇಲ್ಲ. ನೀವು ಯಾವುದನ್ನೆಲ್ಲ ಉಂಟು ಅಂತ ಹೇಳ್ತಿರೋ ಅದು ಭ್ರಮೆ. ಆ ಉಂಟು ಅಂತ ಹೇಳುವವನೇ ಭ್ರಮೆಗೊಳಪಟ್ಟವನು. ಮುಗೀತಲ್ಲ ಹಾಗದ್ರೆ. ಆ ಉಂಟು ಅಂತ ಹೇಳುವವನಿಗೆ ಅಸ್ತಿತ್ವ ಹೋಗುವಂಥಾದ್ದು.

ಅಂಥಾ ಸನ್ನಿವೇಶ ಬಂದಾಗ ನೋಡುವ ಭೇಟಿ ಆಗ್ಬೇಕು ಅನ್ನುವ ಉದ್ದಿಶ್ಯ ಇಲ್ಲ.

ಯದುನಾಥ್ –  ಉದ್ದಿಶ್ಯ ಇಲ್ಲ.

ಅಜ್ಜ –  ಉದ್ದಿಶ್ಯವಿಲ್ಲ.

ಯದುನಾಥ್ –  ಅಕಸ್ಮಾತ್ ಅನ್ನೋದು ಇಲ್ಲ ಅಂತ ನೀವೇ ಹೇಳ್ತೀರಲ್ಲಾ.

ಅಜ್ಜ –  ಅಕಸ್ಮಾತ್ ಇಲ್ಲ ಅಂತ ಹೇಳಿದ ಕೂಡ್ಲೆ, ಈಗ ಲೋಕಾರೂಢಿಯ ಒಂದು ಇದ್ರಲ್ಲಿ ಏನಾದ್ರೂ ಒಂದು ಮಾತಿಗೆ ತಕ್ಕೊಳ್ಳಬೇಕಲ್ಲ ಮಾರಾಯ.

ಯದುನಾಥ್ –  ಈಗ ನೀವು ಹೇಳಿದ್ರಲ್ಲಿ ಅಕಸ್ಮಾತ್ ಅನ್ನೋದು ಇಲ್ಲ ಅಂತ ಆದ್ರೆ ನಿರ್ಧರಿತ ಉಂಟು ಅಂತ ಆದ್ಮೇಲೆ ಭೇಟಿ ಉಂಟಾ ಅಂತ ಕೇಳ್ದೆ.

ಅಜ್ಜ –  ಅದು ಈಗ ಹೇಳೋದಿಲ್ಲ. ಅಕಸ್ಮಾತ್ ಎಂಬುದು ಖಡಾಖಂಡಿತ ಇಲ್ಲ.

ಯದುನಾಥ್ –  ಹೊಸ ಹೊಸ ವಿಚಾರಗಳು ಬರ್ತಾ ಉಂಟ ಈಗ್ಲು.

ಅಜ್ಜ –  ಯಾರಿಗೆ.

ಯದುನಾಥ್ –  ಇಲ್ಲಿ (ಅಜ್ಜನನ್ನು ತೋರಿಸುತ್ತಾ)

ಅಜ್ಜ –  ಇಲ್ಲಿ ಹೊಸ ವಿಚಾರಗಳು ಅಂತ ಏನೂ ಬರೋದಿಲ್ಲ. ವಿಚಾರಗಳೆಲ್ಲಾ ೫೨, ೫೩, ೫೬ನೇ ಇಸವಿಯಲ್ಲಿ ಬಂದದ್ದು. ಅದನ್ನೇ ಈಗ ಹೇಳುವಂಥಾದ್ದು. ಅಂದ್ರೆ ಅದನ್ನೇ ಪುನಃ ಪುನಃ ಹೇಳುವಂಥಾದ್ದು. ಅಷ್ಟೇ ಹೊರತು ಹೊಸದಾಗಿ ಏನೂ ಇಲ್ಲ.

ಯದುನಾಥ್ –  ಒಂದು ತಾಯಿ ಹುಟ್ಟಿದ ಮಗುಗೆ ಮುತ್ತು ಕೊಟ್ಟ ತಕ್ಷಣ ಒಂದು ದ್ವೈತ ಶುರು ಆಯ್ತು ಅಂತ ಹೇಳ್ತೀರಾ. ಒಂದು ಮಗುವಿಗೆ ತಾಯಿ ಪ್ರೀತಿ ಮಾಡಿದ ತಕ್ಷಣವೇ ದ್ವೈತ ಭಾವನೆ ಶುರುವಾಗುತ್ತಾ ಮಗುಗೆ ಅಂತ. ಅಲ್ಲೀವರೆಗೂ ಅದು ಅದ್ವೈತ ಸ್ಥಿತಿಯಲ್ಲೇ ಇತ್ತು. ಅದು ಪ್ರೀತಿ ಮಾಡೋದು ಕೂಡ ದ್ವೈತ ಭಾವನೆ ಶುರು ಆಕ್ತದೆ

ಅಂತ ಹೇಳ್ತಾರೆ. ಹೌದಾ. ಎಲ್ಲಿ ಪ್ರೀತಿ ಅಂತ ಬರುತ್ತೋ, ಅಲ್ಲಿ ಅಸೂಯೆ ಅಂತನೂ ಇರುತ್ತೆ. ಹಾಗಾಗಿ ಅದು ಎರಡು ಇಲ್ಲದಿರೋ ಸ್ಥಿತಿ ಅಂತ ಹೇಳ್ತಾರೆ.

ಅಜ್ಜ – ಮೌನ.

ಯದುನಾಥ್ – ಸ್ಪಂದನವನ್ನು ಭಾಷೆಯಲ್ಲಿ ಹೇಳಲಿಕ್ಕೆ ಆಗೋದಿಲ್ವಾ.

ಅಜ್ಜ – ಮೌನ.

ಯದುನಾಥ್ – ನಿಮಗೆ ೫೨ರಲ್ಲಿ ಅನೇಕ ಅನುಭವಗಳಾಯ್ತಲ್ಲಾ, ಆಗ ನಿಮಗೆ ಯು.ಜಿ ಚಿತ್ರ ಬಂದಿತ್ತಾ. ಬಂದಿರಲೇ ಬೇಕಲ್ಲಾ. ಯಾಕೇಂದ್ರೆ ಆ ಸ್ಥಿತಿಯಲ್ಲಿದ್ದಾಗ ಏನೆಲ್ಲಾ ದರ್ಶನಗಳು ಅಂತ ಹೇಳಿದ್ರಲ್ಲಾ. ಹಾಗೆ ಆ ಮುಖದ ಚಿತ್ರವೂ ಬಂದಿರಬೇಕಲ್ಲಾ.

ಅಜ್ಜ – ಇಲ್ಲ, ಇಲ್ಲ. ದರ್ಶನಕ್ಕೆ ಮಹತ್ವ ಕೊಟ್ರೆ ಮತ್ತೆ ಈ ಲೈನ್ ತಪ್ಪಿ ಹೋಕ್ತದೆ. ಅದಕ್ಕೆಲ್ಲ ಮಹತ್ವ ಕೊಟ್ಟವರೇ ಅಲ್ಲ.

ಯದುನಾಥ್ – ನೀವು ಮಹತ್ವ ಕೊಟ್ಟಿಲ್ಲ. ಆದ್ರೆ ಹೇಳಿದ್ರಲ್ಲಾ ಆಗ ಜೀಸಸ್ (ಯೇಸು) ಬಂದಿದ್ದ, ಮಹಮ್ಮದ್ ಬಂದಿದ್ದ, ಕೃಷ್ಣ ಬಂದಿದ್ದ ಅಂತ್ಹೇಳಿ. ಆ ದರ್ಶನಗಳಾಗುವಾಗ ಇವರು ಯು.ಜಿ ಬಂದಿದ್ರಾ.

ಅಜ್ಜ – ಇಲ್ಲ.

ಯದುನಾಥ್ – ಯು.ಜಿ ಹೇಳ್ತರೆ ಅವರಿಗೆ, ಅಕ್ಕಮಹಾದೇವಿ ಮತ್ತೆ ಲಲ್ಲೇಶ್ವರಿ ಬಂದಿದ್ರಂತೆ. ಕೃಷ್ಣನ ದರ್ಶನ ನಿಮಗೆ ಆಗಿತ್ತಾ ಅಜ್ಜ.

ಅಜ್ಜ – ಇಲ್ಲಿ ಹೇಳುವವರ್ಯಾರಪ್ಪಾ. ಹೇಳುವವರೇ ಇಲ್ಲ ಇಲ್ಲಿ.

ಯದುನಾಥ್ – ಈಗ ಯು. ಜಿ. ಸ್ಪಷ್ಟವಾಗಿ ತಮಗಾದ ದರ್ಶನಗಳ ಬಗ್ಗೆ ಸ್ಪಷ್ಟವಾಗಿ ಹೇಳ್ತಾರೆ. ನಾವು ಕೇಳಿದ್ರೆ 'ನಿಮಗ್ಯಾಕೆ ಬೇಕು' ಅಂತ ಅವ ಹೇಳೋದಿಲ್ಲ. ನಿಮ್ಮ ಹಾಗೆ ಆಗ ಏನಾಗಿದೆಯೋ ಅದನ್ನ ಸ್ಪಷ್ಟವಾಗಿ ಹೇಳ್ತಾನೆ. ನೀವ್ಯಾಕೆ ಸ್ಪಷ್ಟತೆ ತೋರುಸ್ತಿಲ್ಲಾ. ಅಂದ್ರೆ ನೀವು ತಯಾರಾಗಿ ಅಂತ ಅವ ಹೇಳೋದೇ ಇಲ್ಲ.

ಅಜ್ಜ – ಅವ ಹೇಳಿದ ಹಾಗೆ ನಾವೂ ಹೇಳ್ಬೇಕು ಅಂತ ಹೇಳಿಯಾ ನಿಂದು.

ಯದುನಾಥ್ – ಹಾಗಲ್ಲ ಅಜ್ಜ, ಹೇಳ್ಬಾರದು ಯಾಕೆ ಅಂತ ಹೇಳಿ ಅಷ್ಟೆ.

ಅಜ್ಜ – ನಾವು ಹೇಳ್ತಾ ಉಂಟಲ್ಲ ಅದನ್ನೆ.

ಯದುನಾಥ್ – ಹೇಳ್ತಾ ಉಂಟು. ಆದ್ರೆ ಸ್ಪಷ್ಟತೆ ಇಲ್ಲ. ಯಾವಾಗೆಲ್ಲಾ ಒಮ್ಮೆ ಹೇಳ್ತೀರಿ.

ಅಜ್ಜ – ಆ ಮಾತುಗಳು ಬರುವಾಗ ನೀವು ಆಲಿಸಬೇಕು. ನೀವು ಕೇಳಿದಾಗ ಹೇಳೊದಕ್ಕೆ ಆಗೋದಿಲ್ಲ.

ಯದುನಾಥ್ – ನಾವು ಆಲಿಸ್ತಾ ಇದ್ದೇವೆ. ನೀವು ಆಡೋ ಪ್ರತಿಯೊಂದು ಮಾತನ್ನು ಕೇಳ್ತಾ ಇರ್ತೇವೆ ನಾವು.

ಅಜ್ಜ – ಅಲ್ಲಿ ನೋಡಿ ಗೊತ್ತಾಗ್ಬೋದು ನಿಮಗೆ. ಅದು ಬರಿಸುವುದಲ್ಲ. ಅದಾಗಿಯೇ ಬರುವಂಥಾದ್ದು.

ಯದುನಾಥ್ –  ಆದ್ರೂ ಕೂಡ ಅದಾಗಿ ಅದೇ ಬರೋದಿಲ್ಲ. ಎದುರಿಗಿರುವ ವ್ಯಕ್ತಿಗಳೂ ಕೂಡ ಕಾರಣರಾಕ್ತಾರಲ್ಲ. ಸುಮ್ಮಸುಮ್ಮನೆ ಮಾತು ಬರ್ತದ.

ಅಜ್ಜ –  ಹೌದು ಬರ್ತದೆ. ಸುಮ್ಮನೆ ಮಾತು ಬರುವಾಗ ನೋಡಿ, ನೀವು ಆಲಿಸಬೇಕು. ವ್ಯಕ್ತಿಗಳು ಇಲ್ಲವೇ ಇಲ್ಲ.

ಯದುನಾಥ್ –  ಹಾಗಾದ್ರೆ ಮಾತು ನಿಮ್ಮೊಳಗೇ ಬರ್ತದೆ. ಹೋಕ್ತದೆ. ಅಷ್ಟೆ.

ಅಜ್ಜ –  ನಮಗೆ ಮಾತಾಡ್ಲಿಕ್ಕೆ ವ್ಯಕ್ತಿಗಳೇ ಬೇಕು ಅಂತ್ಹೇಳಿ ಇಲ್ಲ.

ಯದುನಾಥ್ –  ನೀವೇ ಹೇಳ್ತೀರ ಎದುರು ಪಾರ್ಟಿ ಇದ್ರೆ ನಮಗೆ ಇನ್ನಷ್ಟು ಹುಮ್ಮಸ್ಸು ಬರ್ತದೆ ಅಂತ್ಹೇಳಿ ಹೇಳಿದ್ರಲ್ಲ.

ಅಜ್ಜ –  ಬೇಕಲ್ಲ. ಬರ್ತದೆ ಹುಮ್ಮಸ್ಸು ಹೌದು. ಆದ್ರೆ ಅಂಥಾ ಪಾರ್ಟಿ ಬೇಕಲ್ಲ. ನೋಡಿ ಅದನ್ನೆಲ್ಲಾ ಹೇಳ್ಬಾರ್ದೀಗ. ಹಾಗೆ ನಾವು ಮಾತಾಡಿದ್ರೆ, ನಿಮ್ಮನ್ನ ನಾವು ಸಣ್ಣದು ಮಾಡಿದ್ಹಾಗೆ ಆಗಬಹುದು.

ಯದುನಾಥ್ –  ನಮ್ಮನ್ನು ಸಣ್ಣದು ಮಾಡಿದ್ರೆ ನಮಗೇನು ಬೇಸರ ಇಲ್ಲ ಅಜ್ಜ.

ಅಜ್ಜ –  ನಿಮಗೆ ಬೇಜಾರು ಇಲ್ಲ, ಹೌದು.

ಯದುನಾಥ್ –  ಹಾಗಾದ್ರೆ ಸಣ್ಣದು ಮಾಡೋದು ಅಂದ್ರೇನು.

ಅಜ್ಜ –  ಇಲ್ಲಿಂದ ಮಾತು ಬರಿಸೋದು ನಿಮ್ಮ ಕೈಯಲ್ಲಿ ಉಂಟು. ನಿನ್ನೆ ಯು.ಜಿ ಇದ್ದ ಕಾರಣ ನಮಗೆ ಅಷ್ಟು ಮಾತುಗಳು ಬಂತು.

ಯದುನಾಥ್ –  ಸಾಲದಜ್ಜ ಇನ್ನೂ ಬರ್ಬೇಕಾಗಿತ್ತು.

ಅಜ್ಜ –  ಹಾಗೆ ಬರ್ಬೇಕಲ್ಲ. ಅಲ್ಲಿಂದ ಏನಾದ್ರು ಬರಬೇಕಾಗಿತ್ತು. ಆಗ ಬರ್ತಿತ್ತು.

ಯದುನಾಥ್ –  ಹೋ, ಹಾಗೆ.

ಯದುನಾಥ್ –  ನಿಮಗೆ ತುಂಬಾ ಗಾಢವಾಗಿ ಬಂದಂಥಾ ರೂಪ ಯಾವುದು.

ಅಜ್ಜ –  ಮಾತಿನಲ್ಲಿ ಹೇಳ್ಳಿಕ್ಕೆ ಆಗೋದಿಲ್ಲ. ನೀವು ಸ್ವಲ್ಪ ಅದಕ್ಕೆ ತಯಾರಾಗಬೇಕು.

ಯದುನಾಥ್ –  ನಾವು ತಯಾರಾಗೋಕೆ ಆಕ್ತಾನೆ ಇಲ್ಲ. ಯಾಕೆ ಅಂದ್ರೆ ಸಂಸ್ಕಾರಗಳಷ್ಟಿದೆ.

ಅಜ್ಜ –  ಇಲ್ಲದಿದ್ರೆ ಇಲ್ಲಿಂದ ಮಾತುಗಳು ಬರ್ಲಿಕ್ಕೂ ಆಗೋದಿಲ್ಲ. ಸ್ವಲ್ಪವಾದ್ರೂ ತಯಾರಾಗ್ಬೇಕಲ್ಲ. ಅಲ್ವಾ. ಸ್ವಲ್ಪ ಸಾಕು. ಹೆಚ್ಚು ಬೇಡ. ಸ್ವಲ್ಪ ತಯಾರಾದ ಕೂಡ್ಲೆ ಮಾತು ಬರ್ತದೆ. ನಾವು ಆಗ ಅವರನ್ನು ಕರೆದು ಮಾತ್ನಾಡಿಸ್ತೇವೆ. ಇಲ್ಲದೆ ಇದ್ರೆ ಎಷ್ಟು ಪ್ರಶ್ನೆಗಳನ್ನ ಕೇಳಿದ್ರೂ ಮಾತು ಬರೋದಿಲ್ಲ.

ಯದುನಾಥ್ –  ಇದನ್ನೇ ರಮಣಮಹರ್ಷಿಗಳು ಏನ್ಹೇಳ್ತಾರೆ ಅಂದ್ರೆ, ನೀವು ಕೊಡ್ಲಿಕ್ಕಾಕ್ತದಾ ಅಂದ್ರೆ ಕೊಡಬಹುದು. ನಿಮ್ಮ ಸಂಸ್ಕಾರ ಬಿಟ್ಟು ಕೊಟ್ಟಲ್ಲಿ. ಅಂತ ಹೇಳ್ತಾರೆ. ಹಾಗಾದ್ರೆ ಸಂಸ್ಕಾರ ತುಂಬ ಗಾಢವಾಗಿದ್ರೆ ಯಾರೂ ಏನೂ ಮಾಡ್ಲಿಕ್ಕೆ ಆಗೋಲ್ಲ ಅಲ್ವಾ. ನಾನು ನಿಮಗೆ ಕೊಡಬಲ್ಲೆ ಇದನ್ನು. ಆದ್ರೆ ಸಂಸ್ಕಾರ ನಿಮ್ಮನ್ನು ಬಿಟ್ಟುಕೊಟ್ರೆ ಮಾತ್ರ ಅಂತ ಹೇಳ್ತಾರೆ ರಮಣರು. ಹಾಗಾಗಿ ಯಾರೂ ಏನೂ ಮಾಡ್ಲಿಕ್ಕಾಗೋಲ್ವಾ. ಸಂಸ್ಕಾರ ತೊಳೆದು ಹಾಕ್ಲಿಕ್ಕೆ ಆಗೋಲ್ವಾ.

ಅಜ್ಜ – ಮೌನ. ಮತ್ತೆ ಇದು ನಿಜವಾದ ಸಂಭಾಷಣೆ ಅಲ್ಲ. ಮನೆಗೆ ಹೋಗ್ಲಿಕ್ಕೆ ಅರ್ಧ ಗಂಟೆ ಸಮಯ ಉಂಟು. ಹಾಗಾಗಿ ಮಾತ್ನಾಡೋದು ಅಲ್ಲಾ.

ಯದುನಾಥ್ – ಇಲ್ಲ ಇಲ್ಲ. ಇದು ನಿಜವಾದ ಸಂಭಾಷಣೆ.

ಅಜ್ಜ – ಇಲ್ಲ.

ಯದುನಾಥ್ – ಯು.ಜಿ ಹೇಳ್ತಾರೆ ನಾನಾಡೋ ಮಾತು ಒಂದು ಸ್ವಲ್ಪ ಅರ್ಥ ಆದ್ರೆ ನಾಳೆ ನೀವು ಯು.ಜಿ ನೋಡ್ಲಿಕ್ಕೂ ಬರೋಲ್ಲ. ಮತ್ತೆ ಯಾವ್ದು ಬೇಡ ಅಂತ ಹೇಳ್ತಾರೆ. ನೀವು ಅಲ್ಲೇ ಕುತ್ಕೋತೀರಿ. ಅಂತರೆ. ಇಷ್ಟು ಜನ ನಿಮ್ಮ ಹತ್ರ ಬರ್ತರೆ. ಅದಕ್ಕೆ ಕಾರಣ ಏನು ಅಂದ್ರೆ ಇನ್ನು ಸಂಸ್ಕಾರ ಹೋಗಿಲ್ಲಾ ಅಂತನೆ ಅರ್ಥ.

ಅಜ್ಜ – ಅದು ಯು.ಜಿ ಹೇಳುವುದು ಮಾತ್ರ ಅಲ್ಲ.

ಯದುನಾಥ್ – ನೀವು ಅದನ್ನ ಹೇಳ್ತೀರಿ. ಒಮ್ಮೆ ಅಜ್ಜ ಹೇಳಿದ ಮಾತು ನಿಮಗೆ ಅರ್ಥ ಆದ್ರೆ ಮತ್ತೆ ನೀವು ಬರ್ಬೇಕಾಗಿಲ್ಲವೇ ಇಲ್ಲ. ಯಾತಕ್ಕೆ. ಈ ಪ್ರಶ್ನೆ ಬರ್ತಿದೆ ಅಂದ್ರೆ ಸಂಸ್ಕಾರ ಬಿಟ್ಟು ಹೋಗಿಲ್ಲ. ಹಾಗಾಗಿ ಮತ್ತೆ ಅದೇ ಪ್ರಶ್ನೆಗಳು ಬರ್ತಾ ಇದೆ ಅಷ್ಟೇ. ನನ್ನ ಪ್ರಶ್ನೆ ಏನು ಅಂದ್ರೆ ಈ ಸಂಸ್ಕಾರಗಳನ್ನ ಒಬ್ಬ ಗುರು ಕಳೆಯಲಿಕ್ಕೆ ಸಾಧ್ಯವಾ ಅಂತ ಅಷ್ಟೆ.

ಅಜ್ಜ – ಅವರವರೇ ಕಳಕೊಳ್ಳಬೇಕು. ಗುರು ಕಳೆಯೋದಿಲ್ಲ. ಗುರು ಎನ್ನುವವನು ನಮಗಿಂತ ಪ್ರತ್ಯೇಕವಾಗಿಲ್ಲ.

ಯದುನಾಥ್ – ನೀವು ಎಷ್ಟು ಅಡಗಿ ಕೂತ್ರೂ ಆಗೋದಿಲ್ಲ. ಅಡಗ್ಲಿಕ್ಕೆ ಆಗೋದಿಲ್ಲ. ಹಿಮಾಲಯದಲ್ಲಿ ಅಡಗಿ ಕೂರ್ಲಿಕ್ಕೂ ಆಗೋದಿಲ್ಲ. ಹೀಗೆ ಆದ್ರೆ ಅದು ಪ್ರಪಂಚಕ್ಕೆ ಗೊತ್ತಾಗ್ಲೇ ಬೇಕು. ಹಿಮಾಲಯದಲ್ಲಿ ಅಡಗಿ ಕೂತಿರುವವರು ನಿಜವಾಗಿ ಜ್ಞಾನಿಗಳಲ್ಲ. ಆ ಸ್ಥಿತಿಯಲ್ಲಿಲ್ಲ. ಅವರು ಪ್ರಪಂಚಕ್ಕೆ ಗೊತ್ತಾಗೋದೇ ಆ ಸ್ಥಿತಿಯ ಲಕ್ಷಣ.

ಅಜ್ಜ – ಮೌನ . . . ನಿಮ್ಮ ಯಾವ ಪ್ರಶ್ನೆಗಳಿಗೂ ನಿಮ್ಮಿಂದಲೇ ಉತ್ತರವನ್ನು ಬರಿಸುವಂಥಾದ್ದು. ಹಾಗಾದ್ರೆ ಹ್ಯಾಗಿರಬೇಕು ನಿಮ್ಮಮನಸ್ಸು. ನಿಮ್ಮ ಮನಸ್ಸು ಸ್ವಲ್ಪನಾದ್ರೂ ಪರಿವರ್ತನೆಗೊಂಡಿರಬೇಕು.

ಯದುನಾಥ್ – ಅಲ್ಲಿಂದ ಶಬ್ದಗಳು ಬರ್ತವೆ ಅಂತ ಅಂದ್ರಲ್ಲಾ ಅಜ್ಜ. ಆ ಶಬ್ದಗಳಿಗೆ ಒಂದು ಮೂರ್ತರೂಪ ಕೊಡಕಾಗುತ್ತಾ.

ಅಜ್ಜ – ನಾವು ಶಬ್ದಕ್ಕೆ ಮಹತ್ವ ಕೊಡೋದೇ ಇಲ್ಲ. ಶಬ್ದವನ್ನು ನಾವು ಉಪಯೋಗಿಸುವಂಥಾದ್ದು ಅಷ್ಟೆ. ಶಬ್ದ ಎಂಬುದು ಒಂದು ವಸ್ತುವೂ ಅಲ್ಲ, ಒಂದು ಶಕ್ತಿಯೂ ಅಲ್ಲ. ಅದು ಅಂದು ಸಂಕೇತ. ಪ್ರತಿಯೊಂದು ಶಬ್ದಗಳೂ ಒಂದು ಸಂಕೇತವಾಗುವಂಥಾದ್ದು. ಅದು ಒಂದು ವಸ್ತುವಿನ ಇರುವಿಕೆಯನ್ನು ಸೂಚಿಸುವ ಸಂಕೇತ ಮಾತ್ರ.

ಯದುನಾಥ್ – ಯು.ಜಿ ಏನು ಹೇಳ್ತಾರೆ ಅಂದ್ರೆ, ಒಂದು ಗಣಪತಿ ಸೂಕ್ತ ಹೇಳಿದ್ರೆ ಒಂದು ಗಣಪತಿ ಆಕಾರ ಕೂತ ಹಾಗೆ ಆಗ್ತದೆ ಅಂತ.

ಅಜ್ಜ – ನಾವು ಯಾವ ಆಕಾರವನ್ನು ಒಪ್ಪುವುದಿಲ್ಲ.

ಯದುನಾಥ್ – ಅಲ್ಲ ಹಾಗೆ ಕಾಣ್ತದಾ ಅಜ್ಜ. ಈಗ ವೇದ ಘೋಷಮಾಡುವಾಗ ಆ ಮಂತ್ರಕ್ಕೆ ಸಂಬಂಧಪಟ್ಟ ಋಷಿಗಳು ಕಾಣ್ತಾರಾ ಅಜ್ಜ.

ಅಜ್ಜ – ಇಲ್ಲ. ಊಹು. ಋಷಿಗಳಿಗೆಲ್ಲ ಅಲ್ಲಿ ಮಹತ್ವವಿಲ್ಲ. ವೇದಘೋಷ ಅನ್ನೋದು ಮನಸ್ಸು ಬುದ್ಧಿಗೆ ಅತೀತವಾದದ್ದು.

ಯದುನಾಥ್ – ಅಲ್ಲಾ ಋಷಿಗಳಿಂದ . . .

ಅಜ್ಜ – ಥಕ್. ಅಷ್ಟೇ ಸಾಕು. ಅಷ್ಟೇ ಸಾಕು. ಮುಂದೆ ನೋಡುವ.

*****

ವರದಾಚಾರ್ಯರೊಡನೆ, ಬೆಂಗಳೂರು, ಮಂಜು ಮನೆ. 10-04-2000

ವರದಾಚಾರ್ಯ – ಎಲ್ಲಾ ಚನ್ನಾಗಿ ಆಯ್ತು ನಿಮ್ಮ ಅನುಗ್ರಹದಿಂದ. ಗೋವಿಂದಾಚಾರ್ಯರಿಗೆ ಎಲ್ಲಾ ವಿಷಯ ಹೇಳಿದೆ. ಅವರು ಆಗ್ಲಿ ಪ್ರಯತ್ನ ಮಾಡ್ತೇನೆ ಅಂತ ಹೇಳಿದ್ರು. ನಂತರ ನಿರ್ಮಲಾ ದೇಶಪಾಂಡೆಯವರನ್ನು ಕಂಡೆ.

ಅಜ್ಜ – ಒಟ್ಟು ವಿಷಯ ಏನಾಯ್ತು. ಅಂತು ವಿರೋಧ ಕಾಣ್ತದಾ.

ವರದಾಚಾರ್ಯ – ವಿರೋಧ ಇಲ್ಲ. ಆದರೆ ಒಪ್ಪಿಸುವುದು ಹ್ಯಾಗೆ ಅಂತ ಅಷ್ಟೇ. ಕೃಷ್ಣನ ವಿಗ್ರಹ ಇಡುವ ವಿಷಯದಲ್ಲಿ ಸ್ವಲ್ಪ ಕಷ್ಟ ಕಾಣ್ತದೆ.

ಅಜ್ಜ – ಅಲ್ಲಿ ವಿಗ್ರಹಕ್ಕೆ ಪೂಜೆ ಅದು ಇದು ಏನೂ ಇಲ್ಲ. ಬರಿ ಇಡುವಂಥಾದ್ದು ಮಾತ್ರ.

ಅಜ್ಜ – ಒಟ್ಟಾರೆ ಅಭಿಪ್ರಾಯ ಹೇಗುಂಟು.

ವರದಾಚಾರ್ಯ – ಒಟ್ಟಾರೆ ಅಭಿಪ್ರಾಯ ಕಲೆತು ಬೆರೆತು ಮಾತಾಡುವಾ ಅಂತ ಉಂಟು. ನೀವು ಮೌನದಿಂದಿದ್ದು ನಮ್ಮಿಂದ ಎಲ್ಲಾ ಮಾಡಿಸಿಕೊಳ್ಳಿ. ನಿಮ್ಮ ಮೌನ ಎಲ್ಲರ ಮೌನದಂತೆ ಅಲ್ಲಾ ಅಲ್ವೇ. ಬಂದದ್ದು ಕೆಲಸ ಮಾಡ್ತೆ ಹೋಗೋದಿಲ್ಲ ಅನ್ನೋದು ನಿಜ.

ಅಜ್ಜ – ಹೌದಾ.

ವರದಾಚಾರ್ಯ – ನಾನು ವಿವರಣೆ ಅವರಿಗೆಲ್ಲಾ ಹೇಳುವಾಗ, ಅವರಿಗೆಲ್ಲಾ ಇದು ಮುಂದೆ ಸಂಭವಿಸುವಂಥಾದ್ದು ಅಂತ ಮನಸ್ಸಿಗೆ ಬಂದುಬಿಟ್ಟಿದೆ. ಆದ್ರೆ . . . .

ಅಜ್ಜ – ನೋಡಿ ಅಲ್ಲಿ (ಅಯೋಧ್ಯೆ) ರಾಮನ ಮೂರ್ತಿ ಇಟ್ಟು ಒಂದು ಪೂಜೆ ಆಗಬೇಕು ಅಂತ್ಹೇಳಿ ಉಂಟು. ಅಲ್ಲಾ ಹಾಗೆ ಕೃಷ್ಣನ ಮೂರ್ತಿಗೆ ವಿರೋಧ ಮಾಡ್ಲಿಕ್ಕೆ ಸಾಧ್ಯ ಇಲ್ಲ ನೋಡಿ.

ವರದಾಚಾರ್ಯ – ನಾನು ಹೇಳಿದೆ ಈ ಕಾರ್ಯ (ಸಮಾಧಿಯಲ್ಲಿ) ಆಗದೆ ಯಾವುದೂ ಆಗೋದಿಲ್ಲಾ ಅಂತ ಹೇಳಿ ಬಂದೆ.

ಅಜ್ಜ – ಏನು ಹೇಳಿದ್ರು.

ವರದಾಚಾರ್ಯ – ಇದು ಆದ್ರೆ ಮುಂದಿನದ್ದೆಲ್ಲ ತನ್ನಿಂದ ತಾನೆ ಆಗಿಕೊಂಡು ಬರ್ತದೆ. ನಿಮಗೆ ಇದ್ರಿಂದ ತೊಂದ್ರೆ ಏನು ಅಂದೆ.

ಅಜ್ಜ – ಆಗುತ್ತಪ್ಪಾ. ನಾವು ಗಲಾಟೆ ಆಗದೆ ಕೆಲಸ ಆಗುವಂಥಾ ರೀತಿಯಲ್ಲಿ ಹೋಕ್ತದೆ. ಗಲಾಟೆ ಏನೂ ಇಲ್ಲ ಅಲ್ಲಿ. ಸಮಾಧಿಯ ಬಳಿ ಕುರಾನ್ ಪಠನಕ್ಕೆ ಒಂದು ಜಾಗ ಆಗ್ಬೇಕು. ಯಾಕೆ ಅಂದ್ರೆ ಅಲ್ಲಿ ಹತ್ತಿರದಲ್ಲಿ ಮೂರ್ತಿ ಇದ್ದ ಕಾರಣ, ಅವರು ಮೂರ್ತಿಪೂಜೆಗೆ ವಿರೋಧ ಇರೋದ್ರಿಂದ ಬರೋದಿಲ್ಲ. ಹಾಗಾಗಿ ನೋಡಿ ಅವರಿಗೆ ಅಲ್ಲಿ ಕೂತುಕೊಳ್ಳಿಕ್ಕೆ ಬೇರೆ ವೇದಿಕೆ ಆಗ್ಬೇಕುಂತ ಅಷ್ಟೆ.

*****